ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1956
ಮಾನ್ಯ ಸದಸ್ಯರ ಹೆಸರು : ಶ್ರೀ ಹೆಚ್.ಎಂ.ರಮೇಶಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 16.03.2022
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ದ್ವಿತೀಯ ಪಿ.ಯು.ಸಿ. ವಿದ್ಯಾರ್ಹತೆಯ ಮೆರಿಟ್ ಆಧಾರದ ಮೇಲೆ ಗ್ರಾಮಲೆಕ್ಕಿಗರ ನೇಮಕಾತಿ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ರಾಜ್ಯದಲ್ಲಿ ಖಾಲಿ ಇರುವ ಗ್ರಾಮಲೆಕ್ಕಿಗರ ಹುದ್ದೆಗಳ ವಿವರ ನೀಡುವುದು)	ಹೌದು. ರಾಜ್ಯದ ಕಂದಾಯ ಇಲಾಖೆ ವ್ಯಾಪ್ತಿಯಲ್ಲಿ ಒಟ್ಟು 9833 ಗ್ರಾಮಲೆಕ್ಕಿಗರ ಹುದ್ದೆಗಳು ಮಂಜೂರಾಗಿದ್ದು, ಪ್ರಸ್ತುತ 1836 ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ಖಾಲಿ ಇರುವ ಹುದ್ದೆಗಳ ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ.
(ಆ)	ಬಂದಿದ್ದಲ್ಲಿ, ಪ್ರಸಕ್ತ ಸಾಲಿನಲ್ಲಿ ಪರೀಕ್ಷೆ ಇಲ್ಲದೇ ಶೇ. 100ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದರಿಂದ ಮುಂದಿನ ನೇಮಕಾತಿಯಲ್ಲಿ ದ್ವಿತೀಯ ಪಿ.ಯು.ಸಿ.ಯ ಅಂಕಗಳ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ಅವಕಾಶದನ್ವಯ ಗ್ರಾಮಲೆಕ್ಕಿಗರ ಹುದ್ದೆಗಳಿಗೆ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಅಭ್ಯರ್ಥಿಯು ಗಳಿಸಿದ ಗರಿಷ್ಟ ಅಂಕಗಳ ಆಧಾರದ ಮೇಲೆ ಹಾಗೂ ಒಂದು ವೇಳೆ ಅಭ್ಯರ್ಥಿಗಳು ಸಮಾನ ಅಂಕಗಳನ್ನು ಗಳಿಸಿದ್ದಲ್ಲಿ, ಅಭ್ಯರ್ಥಿಯ ಜನ್ಮ ದಿನಾಂಕವನ್ನು ಆಧರಿಸಿ ನಿಯಮಾನುಸಾರ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.
(ಇ)	ಹಾಗಿಲ್ಲದಿದ್ದಲ್ಲಿ, ನೇಮಕ ಮಾಡಿಕೊಳ್ಳುವಾಗ ಸರ್ಕಾರ ಅನುಸರಿಸುವ ಮಾನದಂಡನಗಳೇನು; (ವಿವರಗಳನ್ನು ನೀಡುವುದು)	ಉದ್ಭವಿಸುವುದಿಲ್ಲ.
(ಈ)	ನೇರ ನೇಮಕಾತಿ ಮಾಡಿಕೊಳ್ಳಲು ಸರ್ಕಾರಕ್ಕಿರುವ ತೊಂದರೆಗಳೇನು? (ಸಂಪೂರ್ಣ ಮಾಹಿತಿ ನೀಡುವುದು)	ಉದ್ಭವಿಸುವುದಿಲ್ಲ..

ಸಂಖ್ಯೆ: ಕಂಇ 110 ಬಿಎಸ್‌ಸಿ 2022

(ಆರ್. ಅಶೋಕ)
ಕಂದಾಯ ಸಚಿವರು

ಅನುಬಂಧ (ಪ್ರಶ್ನೆ ಸಂಖ್ಯೆ: 1956).

ಗ್ರಾಮಲೆಕ್ಕಿಗರ ಹುದ್ದೆಗಳ ವಿವರ

ಜಿಲ್ಲೆಗಳು	ಮಂಜೂರಾಗಿರುವ ಹುದ್ದೆ	ಭರ್ತಿಯಾಗಿರುವ ಹುದ್ದೆ	ಖಾಲಿ ಹುದ್ದೆ
ಬೆಂಗಳೂರು ನಗರ	251	206	45
ಬೆಂಗಳೂರು ಗ್ರಾ.	223	172	51
ರಾಮನಗರ	275	200	75
ಕೋಲಾರ	305	248	57
ಚಿಕ್ಕಬಳ್ಳಾಪುರ	289	231	58
ತುಮಕೂರು	648	533	115
ಚಿತ್ರದುರ್ಗ	356	233	123
ದಾವಣಗೆರೆ	266	240	26
ಶಿವಮೊಗ್ಗ	376	330	46
ಮೈಸೂರು	476	321	155
ಮಂಡ್ಯ	472	375	97
ಚಾಮರಾಜನಗರ	258	156	102
ಹಾಸನ	459	400	59
ಚಿಕ್ಕಮಗಳೂರು	291	239	52
ಕೊಡಗು	130	98	32
ದಕ್ಷಿಣ ಕನ್ನಡ	325	268	57
ಉಡುಪಿ	215	187	28
ಬಳ್ಳಾರಿ	226	211	15
ಬೀದರ್	344	287	57
ಕಲಬುರಗಿ	410	274	136
ರಾಯಚೂರು	324	257	67
ಕೊಪ್ಪಳ	193	160	33
ವಿಜಯನಗರ	202	201	01
ಯಾದಗಿರಿ	200	171	29
ಬೆಳಗಾವಿ	649	563	86
ವಿಜಯಪುರ	274	255	19
ಬಾಗಲಕೋಟೆ	297	289	08
ಧಾರವಾಡ	235	202	33
ಗದಗ	232	196	36
ಹಾವೇರಿ	295	258	37
ಉತ್ತರ ಕನ್ನಡ	337	236	101
ಒಟ್ಟು	**9833**	**7997**	**1836**